ಸೆಪ್ಟೆಂಬರ್ 29, 2019, ಭಾನುವಾರ

ಹಿರಿಯ ನಾಗರಿಕರ ಭಾನುವಾರ

ಹಿರಿಯರನ್ನು ಆರೈಕೆ ಮಾಡುವದು ಮತ್ತು ಸ್ವೀಕರಿಸುವದು

ಆದಿಕಾಂಡ 46:28–34 ***ಕೀರ್ತನೆ 21*** ***1ತಿಮೊಥೆಯ 5:1–10*** ***ಲೂಕ 2:25–35***

ಹೆಚ್ಚುಕಡಿಮೆ ಎಲ್ಲಾ ರಾಷ್ಟ್ರಗಳಲ್ಲಿಯೂ ಹಿರಿಯ ಜನರ ಸಂಖ್ಯೆಯು ಹೆಚ್ಚುತ್ತಲೇ ಇದೆ. ಗತಕಾಲದಲ್ಲಿ ಹಿರಿಯರು ಕುಟುಂಬದಲ್ಲಿ ಬಲದ ಮೂಲವಾಗಿದ್ದರು ಮತ್ತು ಅವರು ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗಿದ್ದರು; ಅವರು ಪಾತ್ರಗಳನ್ನು ಪೋಷಿಸುತ್ತಿದ್ದರು ಮತ್ತು ಸಂಪ್ರದಾಯದ ಸಂರಕ್ಷಕರಾಗಿದ್ದರು. ಕುಟುಂಬದಲ್ಲಿ ಅವರ ಪಾತ್ರವು ಅನೇಕ ಸಾರಿ ಹಲವಾರು ವರುಷಗಳಿಂದಲೂ ಕುಟುಂಬದ ಸದಸ್ಯರಾಗಿ ಅವರು ಮಾಡಿರುವ ಬಂಡವಾಳ ಹೂಡಿಕೆಗಳ ಪರಿಣಾಮವಾಗಿರುತ್ತವೆ. ಆದರೆ ಪರಿಸ್ಥಿತಿಯು ಸಾಗರದೋಪಾದಿಯ ಬದಲಾವಣೆಯನ್ನು ದಾಟಿ ಹೋಗಿದೆ.

ಭಾರತೀಯ ದೃಶ್ಯಾವಳಿಯು ತನ್ನ ಸ್ವಭಾವದಲ್ಲಿ ಬಹು ವ್ಯತ್ಯಾಸವಾಗಿರುತ್ತದೆ ಯಾಕಂದರೆ ಅದರ ಸಂಕೀರ್ಣತೆಯು ತನ್ನ ಅವಿಭಕ್ತ ಕುಟುಂಬ ಅಥವಾ ಜಂಟಿ ಕುಟುಂಬಗಳಲ್ಲಿ ಆಳವಾಗಿ ಬೇರೂರಿರುತ್ತದೆ. ಅಂಕಿಸಂಖ್ಯೆಗಳ ಅಥವಾ ಸಂಖ್ಯಾಶಾಸ್ತ್ರ ವಿಭಾಗ ಅಥವಾ ಖಾತೆಯ ವರದಿಯ ಪ್ರಕಾರ ಸುಮಾರು 104 ದಶಲಕ್ಷ ಹಿರಿಯ ನಾಗರಿಕರು (60 ವರುಷಕ್ಕೂ ಮೇಲ್ಪಟ್ಟವರು) ಇರುತ್ತಾರೆಂದು ಕಂಡು ಬಂದಿದೆ. 2050 ಇಸ್ವಿಯಲ್ಲಿ ಆ ಅಂಕಿಸಂಖ್ಯೆಯು 325 ದಶಲಕ್ಷಕ್ಕೆ ರಭಸವಾಗಿ ಏರುತ್ತದೆ. ಕುಟುಂಬದಲ್ಲಿ ವಾಸಿಸುವ ಹಿರಿಯರು ದೈಹೀಕ ನಿಂದನೆ, ಮಾನಸಿಕ ಒತ್ತಡ, ಸಾಮಾಜಿಕ ಏಕಾಂತತೆ ಮತ್ತು ಆಥ್ಮಿಕ ಪರಿತ್ಯಾಗವನ್ನು ಎದುರಿಸುತ್ತಾ ಇದ್ದಾರೆ ಎಂಬದನ್ನು ದೃಢೀಕರಿಸಲು ಅನೇಕ ಅಧ್ಯಯನ ವರದಿಗಳು ತಂತ್ರಹೂಡಿರುತ್ತವೆ. ಇಂಥ ಕಠೋರ ಪೈಪೋಟಿಯಲ್ಲಿ ಸಕಲ ಜನರನ್ನು ಕುರಿತು ಖಾಳಜಿವಹಿಸುವ / ಪರಾಂಬರಿಸುವ ದೇವರು ಈ ಸಮಸ್ಯೆಯನ್ನು ಅತ್ಯಲ್ಪ ಮೊತ್ತದ ಅಥವಾ ಸಾಂಕೇತಿಕವಾಗಿರುವ ರೀತಿಯಲ್ಲಿ ಅಲ್ಲ ಆದರೆ ಪ್ರಾಮಾಣಿಕ ಮತ್ತು ಸತತವಾದ ಜವಾಬ್ದಾರಿಕೆಯಿಂದ ಉದ್ದೇಸಿಸಲು ವಿಶ್ವಾಸಿಗಳಿಗೆ, ಕ್ರೈಸ್ತ ಕುಟುಂಬಗಳಿಗೆ ಮತ್ತು ಸಭೆಗೆ ಕರೆ ನೀಡುತ್ತಾ ಇದ್ದಾನೆ.

1. ***ಅನುಕಂಪದ ಆರೈಕೆ/ಖಾಳಜಿ:*** ಇಂದಿನ ಹಳೇ ಒಡಂಬಡಿಕೆಯ ವಾಕ್ಯಭಾಗವು, ಯೋಸೇಫನು ತನ್ನ ಮುದಿ ಅಥವಾ ವೃದ್ಧ ತನ್ನ ವಯಸ್ಸು ಎಷ್ಟೆಂದು ನಿಜವಾಗಿಯೂ ತಿಳಿಯದೆ ಇದ್ದ ತಂದೆಯ ಆರೈಕೆಯನ್ನು ಹೇಗೆ ಮಾಡಿದನು ಎಂಬದನ್ನು ಎದ್ದುಕಾಣುವ ರೀತಿಯಲ್ಲಿ ವರ್ಣಿಸುತ್ತದೆ (ಆದಿಕಾಂಡ 43:27). ಯೋಸೇಫನು ತನ್ನ ತಂದೆಯನ್ನು ಕಾನಾನಿನಿಂದ ಐಗುಪ್ತಕ್ಕೆ ಕರೆದುಕೊಂಡು ಬರುವಂತೆ ತನ್ನ ಸಹೋದರರನ್ನು ತ್ವರೆಯಾಗಿ ಪ್ರೀತಿಯಿಂದ ಕಳುಹಿಸಿದನು (ಆದಿಕಾಂಡ 45:13). ತನ್ನ ತಂದೆಯನ್ನು ಬಹು ಜಾಗರೂಕತೆಯಿಂದ ಕರೆದುಕೊಂಡು ಬರಲು ಬಂಡಿಗಳನ್ನೂ ಮತ್ತು ಜೊತೆಗೆ ಅನಿರೀಕ್ಷಿತ ಸಂದರ್ಭಕ್ಕೆ ಬೇಕಾಗುವ ಆಹಾರವನ್ನೂ ಅವನು (ಯೋಸೇಫನು) ಕಳುಹಿಸಿದನು. ರಾಜವಂಶದ ಸಲಹೆಯಿಂದ ಉತ್ತೇಜಿಸಲ್ಪಟ್ಟವನಾಗಿ ಯೋಸೇಫನು ತನ್ನ ತಂದೆಯನ್ನು ಹಾಗೂ ಒಡಹುಟ್ಟಿದವರನ್ನು ಅತೀ ಫಲವತ್ತಾದ ಪ್ರದೇಶದಲ್ಲಿ ನೆಲೆಸುವಂತೆ ಮಾಡಿದನು.

ಇಂದಿನ ದಿನಗಳಲ್ಲಿ ಹದಿಹರೆಯದ ಜನರು ಅಶಕ್ತತೆಯಲ್ಲಿರುವ ತಮ್ಮ ಹೆತ್ತವರ ಯೋಗಕ್ಷೇಮವನ್ನು ಮರೆತು ಬಿಡಲು ಒಲವು ತೋರುತ್ತಾರೆ. ಕೆಲವು ಸಾರಿ ಅವರು ತಮ್ಮನ್ನು ಸಾಧ್ಯವಾದಷ್ಟು ಅತ್ಯುನ್ನತ ಮಟ್ಟಕ್ಕೆ ಬೆಳೆಸುವ ತಮ್ಮ ಹೆತ್ತವರ ಪ್ರಯತ್ನದಲ್ಲಿ ತಪ್ಪು ಕಂಡು ಹಿಡಿಯುತ್ತಾರೆ. ಮದುವೆಯಾಗಿರುವ ಅನೇಕ ಗಂಡು ಹೆಣ್ಣುಮಕ್ಕಳು ತಮ್ಮ ಭವಿಷ್ಯದ ಬಗ್ಗೆಯೇ ಗಮನ ವಹಿಸುತ್ತಾರೆ ಮತ್ತು ತಮ್ಮ ಹೆತ್ತವರನ್ನು ಅಸಡ್ಡೆ ಮಾಡುವ ಸಾಧ್ಯತೆಯಿರುತ್ತದೆ. ಕೆಲವರು ತಮ್ಮ ಹೆತ್ತವರನ್ನು ಮನೆಯಿಂದ ಆಚೆ ಅಟ್ಟಿಬಿಡುತ್ತಾರೆ ಇಲ್ಲವೆ ಅವರನ್ನು ವೃದ್ಧಾಶ್ರಮದಲ್ಲಿ ಸೇರಿಸಿಬಿಡುತ್ತಾರೆ. ದಶಾಜ್ಞೆಗಳಲ್ಲಿ 5ನೆಯದರ ಅನುಗುಣವಾಗಿ ಅನುಕಂಪದ ಆರೈಕೆಯು ಅಥವಾ ಖಾಳಜಿಯು ಮಕ್ಕಳ ಮೇಲೆ ಆಶೀರ್ವಾದವನ್ನು ತರುತ್ತದೆ. ಇಂದಿನ ದಿನಗಳಲ್ಲಿ ಹದಿಹರೆಯದ ಪೀಳಿಗೆಯು ಸಮಯಕ್ಕಾಗಿ ಓಡುತ್ತಾಯಿದೆ. ಹಿರಿಯರಾದರೋ, "ನೀವು ಊಟ ಮಾಡಿರುವಿರೋ? ನಿಮ್ಮ ಔಷಧಿಗಳನ್ನು ತೆಗೆದುಕೊಂಡಿರುವಿರೋ? ನಿಮ್ಮ ಬೆರಳುಗಳಲ್ಲಿನ ಉಗುರುಗಳನ್ನು ಕತ್ತರಿಸಲೋ", ಎಂಬ ಮಾತನ್ನು ಕೇಳಿಸಿಕೊಳ್ಳಲು ಹಂಬಲಿಸುತ್ತಾ ಇದ್ದಾರೆ. ತಮ್ಮ ನೋವು, ಸಂಕಟ ಮತ್ತು ಅಗತ್ಯತೆಯನ್ನು ಹಂಚಿಕೊಳ್ಳುವಾಗ ಅದನ್ನು ಆಲಿಸಲು ಜೋಡಿ ಕಿವಿಗಳಿಗಾಗಿ ಕಾದುಕೊಂಡಿದ್ದಾರೆ. ಅವರು ತಮ್ಮ ಎರಡನೆಯ ಬಾಲ್ಯದಲ್ಲಿ ಅಸಹಾಯಕರಾಗಿದ್ದಾರೆ. ಅವರಿಗೆ ಅನುಕಂಪದ ಆರೈಕೆಯ ಅಥವಾ ಖಾಳಜಿಯ ಅವಶ್ಯಕತೆಯಿರುತ್ತದೆ.

2. ***ಅನುಭೂತಿಯ ಭರವಸೆ:*** ವೃದ್ಧರನ್ನು ಕಠಿಣವಾಗಿ ಗದರಿಸಬೇಡ. ಅವರನ್ನು ತಂದೆತಾಯಿಗಳೆಂದು ಭಾವಿಸು ಎಂದು ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ನೀಡಿರುವ ಶಿಫಾರಸುಗಳಿಂದ ಇಂದಿನ ಪತ್ರಿಕಾಭಾಗವು ತುಂಬಿಕೊಂಡಿರುವದನ್ನು ನೋಡುತ್ತೇವೆ. ಸಭೆಯಿಂದ ನಡೆಸಲ್ಪಡುವ ವೃದ್ಧರ ಆರೈಕೆ ಕಾರ್ಯಕ್ರಮಕ್ಕೆ ಅರ್ಹತೆಯು 60 ವರುಷಕ್ಕೂ ಕಡಿಮೆಯಿರಬಾರದು ಎಂಬ ಕನಿಷ್ಠ ವಯೋಮಿತಿಯು ಪಟ್ಟಿಯಲ್ಲಿ ಸೇರಿಸಲ್ಪಡಬೇಕು. ಕೊರ್ಬಾನ್ ರೂಪದಲ್ಲಿನ ಈ ಅಭ್ಯಾಸದ ಕುರಿತು ಯೇಸು ಕ್ರಿಸ್ತನು ವಿಮರ್ಶಾತ್ಮಕನಾಗಿದ್ದನು ಎಂದು ಮಾರ್ಕ 7:11–12 ವಚನಗಳಲ್ಲಿ ನೋಡುತ್ತೇವೆ. ಕುಟುಂಬದ ವಿಫಲತೆಯು ಹಣವನ್ನು ಸಭೆಗೆ ಅಥವಾ ಸಮಾಜಕ್ಕೆ ಕಳುಹಿಸುತ್ತದೆ.

ಭಾರತದ ಪರಿಸ್ಥಿತಿಯಲ್ಲಿ ಸೊಸೆಯು ತನ್ನ ಹೆತ್ತ ತಾಯಿ ಹೋಲಿಸಿ ನೋಡುವಾಗ ತನ್ನ ಅತ್ತೆಯನ್ನು ಒಂದು ವ್ಯತ್ಯಾಸವಾದ ರೀತಿಯಲ್ಲಿ ನೋಡುತ್ತಾಳೆ. ತಮ್ಮ ನಡುವಿನ ಅತೀ ಹಳೆಯದಾದ ಬಿರುಕು ಅಥವಾ ಭಿನ್ನಾಭಿಪ್ರಾಯವು ಹಲವಾರು ಕಾರಣಗಳಿಂದಾಗಿ ಮುಂದುವರಿಯುತ್ತಲೇ ಇದೆ. ಬಹುಶಃ ಇದಕ್ಕೆ ಹಿರಿಯರೇ ಜವಾಬ್ದಾರರಾಗಿರಬಹುದು. ಹೀಗಿರುವಾಗಲೂ, ಹಿರಿಯರ ಇಳಿವಯಸ್ಸಿನ ಉಳಿದ ಸಮಯದಲ್ಲಿ ಅವರೊಂದಿಗಿನ ಸಂಬಂಧವು ಸ್ವೀಕೃತವಾಗಿಯೂ ಹಿತಕರವಾಗಿಯೂ ಇರಬೇಕು. ಇದು ಅನುಭೂತಿಯ ಭರವಸೆಯಿಂದ ಸಾಧ್ಯವಾಗುತ್ತದೆ. ಈಗಿನ ಹದಿಹರೆಯದ ಪೀಳಿಗೆಯು ಇಂದಿನ ವೃದ್ಧರಿಗೆ ಯಾವದನ್ನು ಸಲ್ಲಿಸುತ್ತಾರೋ ಅದನ್ನೇ ತಾವು ವೃದ್ಧರಾದಾಗ ಹಿಂದಿರುಗಿ ಪಡೆಯುತ್ತಾರೆ.

ಪರಿತ್ಯಜಿಸಲ್ಪಟ್ಟ ಅಥವಾ ಕೆಟ್ಟದಾಗಿ ಸಂಸ್ಕರಿಸಲ್ಪಟ್ಟಿರುವ ಹೆತ್ತವರು ತಮ್ಮ ಆಸ್ತಿಯನ್ನು ಹಾಗೂ ಆದಾಯದ ಮೂಲವನ್ನು ಹಿಂದಕ್ಕೆ ಪಡೆಯುವಂತೆ ಸಂರಕ್ಷಿಸಲು ಮುಂಬೈನ ನ್ಯಾಯಾಲಯವು ಒಂದು ತೀರ್ಪನ್ನು ಮಂಡಿಸಿರುತ್ತದೆ. ಹಿರಿಯರೊಂದಿಗಿನ ಅನುಭೂತಿಯ ಭರವಸೆಯ ಕೊರತೆಯಿಂದಾಗಿಯೇ ಈ ಮಂಡನೆಯು ಜಾರಿಗೊಳಿಸಲ್ಪಟ್ಟಿರುತ್ತದೆ.

3. ***ಹೃತ್ಪೂರ್ವಕ ಗೌರವ:*** ಚೊಚ್ಚಲ ಮಗುವಿಗಾಗಿ ಕೃತಜ್ಞತೆಯ ಧಾರ್ಮಿಕ ವಿಧಿಗಳನ್ನು ನೆರವೇರಿಸಲು ಮಗುವಾದ ಯೇಸುವನ್ನು ಯೆರೂಸಲೇಮಿನ ದೇವಾಲಯಕ್ಕೆ ಕರೆತಂದಾಗ ಸಿಮೆಯೋನನು ಮತ್ತು ಅನ್ನಳೆಂಬ ಇಬ್ಬರು ಹಿರಿಯರಿಗೆ ಕೊಡಲ್ಪಟ್ಟ ಗೌರವನ್ನು ಹೊಸ ಒಡಂಬಡಿಕೆಯು ಎತ್ತಿತೋರಿಸುತ್ತದೆ. ***'ಸಿಮೆಯೋನ',*** ಎಂಬ ಇಬ್ರಿಯ ಹೆಸರಿನ ಅರ್ಥವು 'ವಿಧೇಯತೆಯ ಆಲಿಸುವಿಕೆ', ಆಗಿರುತ್ತದೆ. ಸಿಮೆಯೋನನು ತನ್ನ ಹೆಸರಿಗೆ ತಕ್ಕಂತೆಯೇ ನೀತಿವಂತನೂ ದೇವಭಕ್ತನೂ ಆಗಿದ್ದನು. ಅವನು ಇಸ್ರಾಯೇಲಿನ ಸಂತೈಸುವಿಕೆಯನ್ನು ಹಾರೈಸುತ್ತಾ ಎದುರುನೋಡುತ್ತಾ ಇದ್ದನು. ಪವಿತ್ರಾತ್ಮನು ಅವನ ಮೇಲೆ ಇದ್ದನು. **"**ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು**"**, ಎಂದು ಅವನು ಘೋಷಿಸಿದನು ಎಂಬದಾಗಿ ಲೂಕ 2:30 ರಲ್ಲಿ ನೋಡುತ್ತೇವೆ. ಆ ದೇವಾಲಯದಲ್ಲಿ 84 ವರುಷ ವಯಸ್ಸಿನ ಅನ್ನಳೆಂಬ ಪ್ರವಾದಿನಿಯೂ ಇದ್ದಳು. ಲ್ಯಾಟಿನ್‌ನ ಹೆಸರಾದ ***'ಅನ್ನ'*** ಎಂಬದರ ಅರ್ಥವು, 'ಕೃಪೆಯಿಂದ ತುಂಬಿರುವ, ಉಪಕಾರ', ಎಂಬದಾಗಿರುತ್ತದೆ. ಆಕೆಯು ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದಳು ಮತ್ತು ಮೆಸ್ಸೀಯನಿಗಾಗಿ ಕಾದುಕೊಂಡಿದ್ದವರೆಲ್ಲರ ಮುಂದೆ ಮಗುವಿನ ಕುರಿತು ಮಾತಾಡಿದಳು. ಆ ಇಬ್ಬರು ಹಿರಿಯರು ಯೋಸೇಫನಿಗಾಗಲಿ ಮರಿಯಳಿಗಾಗಲಿ ಸಂಬಂಧಿಕರಾಗಿರಲಿಲ್ಲ. ಸಿಮೆಯೋನ ಮತ್ತು ಅನ್ನ ಇವರಿಬ್ಬರನ್ನೂ ಗಂಡು ಹೆಣ್ಣು ಎಂಬ ಯಾವ ಪಕ್ಷಪಾತವಿಲ್ಲದೆ ಅವರ ಭಕ್ತಿಗಾಗಿ ಗೌರವಿಸಲು ದೇವರು ಆಯ್ಕೆಮಾಡಿಕೊಂಡನು. ಈ ಇಬ್ಬರೂ ಮೆಸ್ಸೀಯನ ಬರುವಿಕೆಗಾಗಿ ಕಾದುಕೊಂಡಿದ್ದರು.

ಕುಟುಂಬದಲ್ಲಿನ ಪ್ರತಿಯೊಬ್ಬ ಹಿರಿಯ ವ್ಯಕ್ತಿಯು ಒಂದು ಮಗುವು 'ಉಲ್ಲಾಸದ ಕೇಂದ್ರ' ಮತ್ತು 'ನಿರೀಕ್ಷೆಯ ನಕ್ಷತ್ರ' ಆಗುವದನ್ನು ಕಾತುರದಿಂದ ಕಾದುಕೊಂಡಿರುತ್ತಾರೆ. ಅದು ಸಂಭವಿಸುವಂತೆ ಅವರು ಉಪವಾಸದಿಂದ ಪ್ರಾರ್ಥಿಸುತ್ತಾರೆ. ಅವರು ಒಳ ಸೇರಿಸುವಂತವುಗಳು ಮತ್ತು ಹೂಡುವ ಬಂಡವಾಳಗಳು ಯುವ ಪೀಳಿಗೆಯನ್ನು ರೂಪಿಸಿರುತ್ತವೆ. ಪ್ರತಿಯೊಬ್ಬ ಮಗುವೂ ಒಬ್ಬ ಚಿಕ್ಕ ಮೆಸ್ಸೀಯನಾಗುತ್ತಾನೆ. ಈಗ, ಅವರನ್ನು ತಮ್ಮ ಉಲ್ಲಾಸದ ಮತ್ತು ನಿರೀಕ್ಷೆಯ ಗುರುತಿನಿಂದ ಗೌರವಿಸುವದು ಅವರ ಜೀವಿತ ಕಾಲದ ತ್ಯಾಗಕ್ಕೆ ಮೆಚ್ಚುಗೆಯನ್ನು ತೋರಿಸುವದಕ್ಕಿಂತ ಹೆಚ್ಚಾಗಿರುತ್ತದೆ.

ಮುಕ್ತಾಯ: ಹಿರಿಯ ನಾಗರಿಕರ ಭಾನುವಾರವನ್ನು ಆಚರಿಸುತ್ತಿರುವ ನಾವು ಸತ್ಯವೇದದ ಮಾರ್ಗದರ್ಶನದಲ್ಲಿ ಅನುಕಂಪದ ಆರೈಕೆಯನ್ನು ಹೊಂದಲು ಮತ್ತು ಅನುಭೂತಿಯ ಭರವಸೆಯನ್ನು ಪ್ರವೇಶಿಸುವದರ ಮೂಲಕ ಹೃತ್ಪೂರ್ವಕವಾದ ಗೌರವಕ್ಕೆ ಅವರ ಜೀವನಗಳನ್ನು ಗುರುತಿಸಲು ನಮ್ಮನ್ನು ನಾವು ನೆನಪಿಸಿಕೊಳ್ಳೋಣ.

ಸಂದೇಶ: ಘನ॥ ಡಾ॥ ಆರ್ ಮೋಹನ್‌ರಾಜ್
ಅನುವಾದ: ಜೇಮ್ಸ್ ಸಿ ಮುತ್ತಲಗೇರಿ